# ವಚನ ಬದ್ಧತೆಯ ದಾಖಲೆ

ಅಪೊಸ್ತಲರ ಕೃತ್ಯಗಳು ಬದಲಾವಣೆಯ ಪುಸ್ತಕವಾಗಿದೆ. "ಯೇಸುವನ್ನು ಈಗಲೇ ಒಪ್ಪುವ" ಅಥವಾ ಯೇಸುವಿನ ಕರೆಯನ್ನು ನಿರಾಕರಿಸುವ ನಿರ್ಧಾರಮಾಡುವ ಸಮಯವು ಇದಾಗಿದೆ. ದೇವರ ಸೆಳೆಯುವ ಕೃಪೆಯ ಕರೆಗೆ ಪ್ರತಿ ಸ್ತ್ರೀ ಪುರುಷರು ಪ್ರತಿಕ್ರಿಯಿಸಬೇಕು ಎಂಬ ಉತ್ತರವನ್ನು ಅಪೊಸ್ತಲರು ನೀಡಿರುವರು. ಯೇಸುವಿನ ಕಥೆಯಲ್ಲಿ ಉಂಟಾಗಬಹುದಾದ ತಕ್ಷಣದ ಬದಲಾವಣೆಯ ಕುರಿತು ಓದುಗರು ಪ್ರತಿಕ್ರಿಯಿಸಬೇಕಾಗುತ್ತದೆ.

ಈ ಪುಸ್ತಕವು ಮಧ್ಯಂತರ ಸ್ಥಳವಾಗಿರುವದಿಲ್ಲ - ನಿರ್ಧಾರವನ್ನು ತಡ ಮಾಡುವವನಿಗೆ ಇದು ಸುರಕ್ಷೆಯ ಸ್ವರ್ಗವಾಗಿರುವದಿಲ್ಲ, ಸಂದೇಹಪಡುವವನಿಗೆ ಸಂತೈಸುವಿಕೆಯಲ್ಲ. ಇಬ್ಬಗೆಯ ಮನಸ್ಸನ್ನು ಹೊಂದಿರುವವನಿಗೆ ಕರುಣೆಯೂ ಇರುವದಿಲ್ಲ. ಪ್ರತಿಕಥೆಯಲ್ಲೂ, ದೃಢವಾದ ಸಮರ್ಪಣೆಯನ್ನು ಅಥವಾ ತಿರಸ್ಕಾರವನ್ನು ತಿಳಿಸುತ್ತದೆ, ಕೆಲವು ಸಾರಿ ತಿರಸ್ಕಾರದ ಕೋಪವು ಪ್ರಸಂಗಿಗೆ ಹಿಂಸೆಯನ್ನು ಉಂಟುಮಾಡಿರುತ್ತದೆ. ಆದ್ದರಿಂದ ಯೇಸುವಿನ ದೃಢವಾದ ವ್ಯಾಖ್ಯಾನದಂತೆ, "ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ; ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದರಿಸುವವನಾಗುತ್ತಾನೆ" (ಮತ್ತಾಯ 12:30).

## ಪ್ರಥಮ ಶಿಷ್ಯರ ವಚನ ಬದ್ಧತೆ

ಯೇಸು ತನ್ನ ಜೀವಿತದ ಉತ್ತುಂಗದಲ್ಲಿರುವಾಗ, ಅಪೊಸ್ತಲರು ಬಲಹೀನರಾಗಿದ್ದರು, ಗೊಂದಲದಲ್ಲಿದ್ದರು, ಕೆಲವು ಸಾರಿ ಅಧೈರ್ಯವುಳ್ಳವರೂ ಆಗಿದ್ದರು. ತೋಟದಲ್ಲಿ ಯೇಸುವು ಹಿಡಿಯಲ್ಪಟ್ಟಾಗ, ಅವೆಲ್ಲರೂ ಆತನನ್ನು ತೊರೆದು ಓಡಿಹೋದರು (ಮತ್ತಾಯ 26:56; ಮಾರ್ಕ 14:50). ಆದರೆ ಪೇತ್ರನು ಆತನನ್ನು ದೂರದಿಂದ ಹಿಂಬಾಲಿಸುತ್ತಿದ್ದನು (ಮಾರ್ಕ 14:54; ಲೂಕ 22:54), ನಂತರ ಆತನನ್ನು ಅರಿಯೆನೆಂದು ಬೊಂಕಿದನು (ಲೂಕ 22:60). ಒಂದು ವೇಳೆ, ಯೋಹಾನನು ಯೇಸುವಿನ ಬಗ್ಗೆ ಹೆಚ್ಚು ಕಾಳಜಿವುಳ್ಳವನಾಗಿದ್ದರೆ, ಯೋಹಾನ 18:15, 16ರಲ್ಲಿ ತಿಳಿಸಿರುವಂತೆ, ಅವನು ಸಹ ಯಾಜಕರೊಂದಿಗೆ ಅವರ ಅಂಗಳದೊಳಗೆ ಪೇತ್ರನನ್ನು ಕರೆತಂದಿದ್ದರೂ ಸಹ, ಅವರಲ್ಲಿ ಯಾರೊಬ್ಬರು ಯೇಸುವಿನ ಪರವಾಗಿ ಮಾತನಾಡಲಿಲ್ಲ, ಅಥವಾ ಪಿಲಾತನು ನೀಡಿದ ಯೇಸುವಿನ ತೀರ್ಮಾನದ ಬಗ್ಗೆ ಅಕ್ಷೇಪವನ್ನು ಮಾಡಲಿಲ್ಲ, ಅವರು ಯೇಸುವಿನ ಶಿಲುಬೆಯನ್ನು ಹೊರುವಲ್ಲಿಯಾಗಲೀ, ಆತನ ಸಮಾಧಿಯ ಬಗ್ಗೆಯಾಗಲೀ, ಸಹಕರಿಸಲಿಲ್ಲ (ಲೂಕ 23:50-53)!

ಆದರೆ ಇದೇ ಮನುಷ್ಯರು ನಂತರದಲ್ಲಿ, ಆತನ ಪುನರುತ್ಥಾನದ ಕುರಿತು ಪ್ರಬಲವಾದ ಸಾಕ್ಷಿಯನ್ನು ನೀಡಿದರು (ಅಪೊಸ್ತಲರ ಕೃತ್ಯಗಳು 4:33). ಹಿಂಸೆಗೊಳಗಾಗುವಾಗ, ಧೈರ್ಯವಾಗಿ ಸುವಾರ್ತೆಯನ್ನು ಮುಂದುವರಿಸಿದರು, ಅವರು ಪ್ರಚಾರ ಮಾಡಬಾರದೆಂಬ ಆದೇಶವನ್ನು ಹೊಂದಿದ್ದರು ಯೇಸು ಕ್ರಿಸ್ತನ ಬಗ್ಗೆ ಪ್ರಚಾರ ಮಾಡಿದರು (ಅಪೊಸ್ತಲರ ಕೃತ್ಯಗಳು 4:29). ಯೇಸುವಿನ ಬಗ್ಗೆ ಇನ್ನು ಮುಂದೆ ಮಾತನಾಡಬಾರದೆಂದು ಹೇಳಿದ್ದರೂ ಯೇಸುವಿನ ಬಗ್ಗೆ ಇನ್ನು ಮುಂದೆ ಮಾತನಾಡಬಾರದೆಂದು ಹೇಳಿದ್ದರೂ (ಅಪೊಸ್ತಲರ ಕೃತ್ಯಗಳು 4:18). ಯೆಹೂದ್ಯರ ಅಧಿಕಾರಿಗಳಿಗಿಂತಲೂ ದೇವರಿಗೆ ಒಳಗಾದರು (ಅಪೊಸ್ತಲರ ಕೃತ್ಯಗಳು 4:19, 20; 5:28, 29).

ಈ ಅಪೊಸ್ತಲರು ಬೆಟ್ಟದಂಥ ಹಿಂಸೆಗಳನ್ನು ಎದುರಿಸಿದರು. ಅವರನ್ನು ಹಿಡಿದು ಸೆರೆಮನೆಗೆ ಹಾಕಿದ್ದರೂ, ಅವರು ಸುವಾರ್ತೆಯನ್ನು ಮುಂದುವರಿಸಿದಾಗ, ದೇವದೂತರು ಅವರನ್ನು ಬಿಡುಗಡೆ ಮಾಡಿದರು (ಅಪೊಸ್ತಲರ ಕೃತ್ಯಗಳು 5:18-20). ಅವರನ್ನು ಹಿರಿಸಭೆಯ

ಮುಂದೆ ನಿಲ್ಲಿಸಿದಾಗ, ಅವರು ಅವರನ್ನು ಪ್ರಶ್ನಿಸಿದರು, ಹೀನೈಸಿದರು, ಭೇದಮಾಡಿದರು ಅಂತಿಮವಾಗಿ ನಿಯಮ ಬಾಹಿರವಾದ ಏಟುಗಳನ್ನು ನೀಡಿದರು (ಅಪೊಸ್ತಲರ ಕೃತ್ಯಗಳು 5:27-40). ಮೇಲಂತಸ್ತಿನ ಯೆಹೂದ್ಯರು ಅವರನ್ನು ಬಹಿರಂಗವಾಗಿ ಹಿಂಸಿಸಿದರು, ರಕ್ತ ಸುರಿಸಿಕೊಂಡವರಾಗಿ ಯೆರೂಸಲೇಮಿನ ಬೀದಿಯಲ್ಲಿ ಸಾಗಿದರೂ, ಯೇಸುವಿನ ನಿಮಿತ್ತ ಹಿಂಸೆಯನ್ನು ಸಹಿಸಿಕೊಂಡರೆಂದು ಕ್ರೈಸ್ತರಿಗೆ ಸಂತೋಷವಾಗಿ ತಿಳಿಸಿದರು (ಅಪೊಸ್ತಲರ ಕೃತ್ಯಗಳು 5:41)! ಕುರಿಮರಿಗಳಂತ್ತಿದ್ದ ಇವರುಗಳಿಗೆ ಜೀವ ಭಯದ ಹಿಂಸೆಯು ಉಂಟಾಗು ವಾಗ, ಅವರು ಸಿಂಹದಂತೆ ಬಲವುಳ್ಳವರಾಗಿ, ಪ್ರತಿ ಅವಕಾಶದಲ್ಲೂ ಸುವಾರ್ತೆಯನ್ನು ಸಾರಿದರು (ಅಪೊಸ್ತಲರ ಕೃತ್ಯಗಳು 5:42).

ಸ್ತ್ರೀಯರು ಸಹ ವ್ಯತ್ಯಾಸವುಳ್ಳವರೇ ಆಗಿದ್ದರು; ಯೇಸುವಿನ ಮರಣದ ಹಿನ್ನೆಲೆಯಲ್ಲಿ ಕಣ್ಣೀರು ಸುರಿಸುವವರಾಗಿದ್ದರೂ, ಅವರುಗಳು ಸಹ ಹೆಚ್ಚಿನ ಉದ್ವೇಗಕ್ಕೆ ಒಳಗಾಗಲಿಲ್ಲ (ಲೂಕ 23:27-31). ಅವರು ಯೇಸುವಿನ ಸಮಾಧಿಯನ್ನು ಶೃಂಗರಿಸಿದರು ಲೂಕ (23:55, 56). ವಾರದ ಮೊದಲನೆಯ ಮುಂಜಾನೆಯಂದು ಸಮಾಧಿಗೆ ಹೋದರು (ಮತ್ತಾಯ 28:1). ಇವರಲ್ಲಿ ಯೇಸುವಿನ ತಾಯಿಯಾದ ಮರಿಯಳು, ಮಗ್ದಲದ ಮರಿಯಳು, ಸಲೋ ಮೆಯು, ಯೋಹಾನಳು, ಬೇರೆ ಮರಿಯಳು (ಬಹುಶಃ ಯಾಕೋಬನ ತಾಯಿ) ಯೇಸುವಿನ ಖಾಲಿಯಾದ ಸಮಾಧಿಯನ್ನು ವೀಕ್ಷಿಸಿದವರಲ್ಲಿ ಮೊದಲಿಗರಾದರು (ಮತ್ತಾಯ 28:1; ಮಾರ್ಕ 16:1, 2; ಲೂಕ 24:10).

ಮೇಲುಪ್ಪರಿಗೆಯಲ್ಲಿ ಕೂಡಿಬಂದಿದ 120 ಶಿಷ್ಯರಲ್ಲಿ, ಯಥಾರ್ಥರಾದ ಈ ಸ್ತ್ರೀಯರೂ ಇದ್ದರು. ಈ ಸಮಯದಲ್ಲಿಯೇ ಮತ್ತಿಯನನ್ನು ಅಪೊಸ್ತಲನನ್ನಾಗಿ ಆಯ್ಕೆ ಮಾಡಲಾಯಿತು (ಅಪೊಸ್ತಲರ ಕೃತ್ಯಗಳು 1:14-26); ಆದ್ದರಿಂದ ಯೇಸುವಿನ ಶಿಷ್ಯಮಂಡಲಿಯಲ್ಲಿ ಸ್ತ್ರೀಯರೂ ಸಹ ಭಾಗಿಗಳಾಗಿದ್ದರು, ಯೇಸುವಿನ ವಿಚಾರಣೆಯ ಸಮಯದಲ್ಲಿ, ಆತನ ಶಿಲುಬೆಯ ಮರಣದಲ್ಲಿ ಮತ್ತು ಆತನ ಸಮಾಧಿ ಕಾರ್ಯದಲ್ಲಿ ಮೌನವಾದ ಸಹಾಯಕರಾಗಿದ್ದರು. ಆತನ ಪುನರುತ್ಥಾನದ ನಂತರ ಅವರು ಬಲವಾದ ಸಮರ್ಪಣೆಯನ್ನು ಮಾಡಿಕೊಂಡವರಾಗಿದ್ದರು, ಪೇತ್ರನ ಸೆರೆವಾಸದ ಸಮಯದಲ್ಲಿ, ವಿಶೇಷವಾದ ಸ್ತ್ರೀಯರ ಪ್ರಾರ್ಥನಾ ಕೂಟವನ್ನು ಸಹ ಆಯೋಜಿಸಿದ್ದರು (ಅಪೊಸ್ತಲರ ಕೃತ್ಯಗಳು 12:12).

ಅರಿಮಥಾಯದ ಯೋಸೆಫನು ಕ್ರೂಜೆಯಿಂದ ಯೇಸುವನ್ನು ಪಡೆದು, ಅದನ್ನು ಸಮಾಧಿ ಮಾಡಿದ್ದನು. ಅವನು ಹಿರೀ ಸಭೆಯ ಸದಸ್ಯನಾಗಿದ್ದರೂ, ಅವನು ಈ ಅಪರಾಪದ ಕಾರ್ಯವನ್ನು ಮಾಡಿದ್ದನು (ಲೂಕ 23:50). ಯೆಹೂದ್ಯರ ಭಯದಿಂದ ಅವನು ತನ್ನ ನಂಬಿಕೆಯನ್ನು ಗೌಪ್ಯವಾಗಿಟ್ಟಿದ್ದನು (ಯೋಹಾನ 19:38). ಅವನು ಬಹಿರಂಗವಾಗಿಯೇ ಯೇಸುವಿನ ದೇಹವನ್ನು ಪಡೆದುಕೊಂಡದ್ದರಿಂದ, ಅವನ ಶಿಷ್ಯತ್ವವು ಇನ್ನು ರಹಸ್ಯವಾಗಿ ಉಳಿದಿರಲಿಲ್ಲ. ಯೋಸೇಫನೊಂದಿಗೆ ನಿಕೋದೇಮನು ಸಹ ಯೇಸುವಿನ ದೇಹಕ್ಕೆ ಸುಗಂಧ ದ್ರವ್ಯಗಳನ್ನು ಅಭಿಷೇಕಿಸಿದ್ದನು (ಯೋಹಾನ 19:39, 40). ಅವನೂ ಸಹ ಹಿರೀ ಸಭೆಯ ಸದಸ್ಯನಾಗಿದ್ದನು, ಹಾಗೂ "ಯೆಹೂದ್ಯರ ಮುಖಂಡನಾಗಿದ್ದನು" (ಯೋಹಾನ 3:1). ಯೇಸುವಿನ ದೇಹವನ್ನು ಸಮಾಧಿ ಮಾಡುವಲ್ಲಿ ಅವರಿಬ್ಬರೂ ಸಹ ಗಮನಾರ್ಹವಾಗಿ ಭಾಗಿ ಗಳಾಗಿದ್ದರಿಂದ, ಹಿರೀ ಸಭೆಯಲ್ಲಿನ ಅವರ ಸದಸ್ಯತ್ವಕ್ಕೆ ಚುತಿ ಬಂದಿರಬಹುದು, ಏಕೆಂದರೆ ಅವರು ಯೇಸುವಿಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದರು.

ಕ್ರೂಜಿಯ ನಂತರದ ಆರು ವಾರಗಳ ಅಂತರದಲ್ಲಿಯೇ, 120 ಜನ ಸಹೋದರರು ಅನ್ಯೋನ್ಯತೆಗೆ ಸೇರಿ ಬಂದು ತಮ್ಮ ಯಥಾರ್ಥತೆಯನ್ನು ತೋರಿದರು (ಅಪೊಸ್ತಲರ ಕೃತ್ಯಗಳು 1:15). ಅಪೊಸ್ತಲರ ಹಾಗೂ ಸ್ತ್ರೀಯರ ಸಂಗಡ ಯೇಸುವಿನ ಸಹೋದರರೂ ಸಹಭಾಗಿಗಳಾಗಿದ್ದರು. ಈ ಹಿಂದೆ ಮರಿಯಳ ಇತರ ಪುತ್ರರು ಯೇಸುವನ್ನು ಮೆಸ್ಸೀಯನೆಂದು ಒಪ್ಪಿಕೊಂಡಿರಲಿಲ್ಲ. ಯೇಸು ಪರ್ಣಶಾಲೆಗಳ ಹಬ್ಬಕ್ಕೆ ಹೋಗಿ, ಅದ್ಭುತಗಳನ್ನು ಮಾಡಲಿಲ್ಲ

ಎಂದು ತಿಳಿದು ಆತನನ್ನು ಒಪ್ಪಿಕೊಳ್ಳಲು ಹಿಂಜರಿದಿದ್ದರು (ಯೋಹಾನ 7:1-5). ಅವನ ಮತ್ತೊಬ್ಬ ಸಹೋದರನಾದ ಯಾಕೋಬನು ಸಭೆಯ ಪ್ರಮುಖನಾಗಿದ್ದನು. ಸುನ್ನತಿಯ ಕುರಿತಾದ ಚರ್ಚೆಗಾಗಿ ಅವನು ಸಹ ಯೆರೂಸಲೇಮಿನ ಸಭೆಯಲ್ಲಿ ಹಾಜರಿದ್ದರು (ಅಪೊಸ್ತಲರ ಕೃತ್ಯಗಳು 15:13). ಅವನು ಸಹ ಯೆರೂಸಲೇಮಿನ ಸಭೆಯ ಒಂದು ಸ್ತಂಭ ಎಂದು ಪರಿಗಣಿಸಲಾಗಿದೆ (ಗಲಾತ್ಯ 1:19; 2:9, 12), ಹಾಗೂ ಅವನು ಹೊಸ ಒಡಂಬಡಿಕೆಯ ಒಂದು ವಿಶೇಷ ಪ್ರೇರಣೆ ಪುಸ್ತಕವನ್ನು ಬರೆದಿರುವನು (ಯಾಕೋಬ 1:1).

ಯೇಸುವನ್ನು ಹಿಡಿದು ಹಾಗೂ ವಿಚಾರಣೆಯ ದಿನದಿಂದ, ಪಂಚಾಶತ್ತಮ ಹಬ್ಬದ ದಿನದವರೆಗೆ ವಿಶೇಷವಾದ ಬದಲಾವಣೆಗಳು ಜರುಗಿದವು. ಈ ಹಿಂದೆ, ಶಿಷ್ಯರು ನಡುಗುವವ ರಾಗಿದ್ದರು; ನಂತರದಲ್ಲಿ ಅವರು ಯೇಸುವಿನಲ್ಲಿ ಭಯಭಕ್ತಿವುಳ್ಳವರಾಗಿದ್ದರು (ಅಪೊಸ್ತಲರ ಕೃತ್ಯಗಳು 2:43). ಆದಿ ಕ್ರೈಸ್ತರು, ನಂಬಿಕೆ ಮತ್ತು ಆಚರಣೆಗಳಲ್ಲಿ ಐಕ್ಯತೆಯನ್ನು ಸಾಧಿಸಿದ್ದರು; ಅವರು ಪರಸ್ಪರ ಅನುಕಂಪ ಮತ್ತು ಪ್ರೀತಿಯನ್ನು ಪ್ರದರ್ಶಿಸಿದರು; ಅವರ ಆರಾಧನೆಯಲ್ಲಿ ಐಕ್ಯತೆ ಹಾಗೂ ಆಳವಾದ ಅನ್ಯೋನ್ಯತೆಯನ್ನು ತೋರ್ಪಡಿಸಿದರು (ಅಪೊಸ್ತಲರ ಕೃತ್ಯಗಳು 2:42-44). ಈ ಹಿಂದೆ ಎಂದೂ ತೋರ್ಪಡಿಸದಂತ, ಸಹಕಾರ ಹಾಗೂ ಔದಾರ್ಯವನ್ನು ಕ್ರೈಸ್ತರಿಗೆ ತೋರಿದ್ದರು (ಅಪೊಸ್ತಲರ ಕೃತ್ಯಗಳು 2:44, 45; 4:32-35). ಅವರಲ್ಲಿ ಜರುಗಿದ್ದ ಈ ವಿಶೇಷವಾದ ಬದಲಾವಣೆಯ ಪರಿಣಾಮವು ಜಗತ್‌ಪ್ರಸಿದ್ಧವಾಯಿತು.

## ಇತರರ ಸಮರ್ಪಣೆ

ಕ್ರಿಸ್ತನಿಗೆ ತಮ್ಮ ಜೀವಿತವನ್ನು ಪೂರ್ಣ ಸಮರ್ಪಿಸಿಕೊಂಡವರ ಇತರರ ಕುರಿತು ಸಹ ಅಪೊಸ್ತಲರ ಕೃತ್ಯದಲ್ಲಿ ಗಮನಿಸುತ್ತೇವೆ. ಲೇವಿಯನಾದ, ಬಾರ್ನಬನು ಕುಪ್ರ ದ್ವೀಪದಲ್ಲಿ ಒಂದು ಸ್ವಾಸ್ತ್ಯವನ್ನು ಹೊಂದಿದ್ದನು; ಆದಿ ಕ್ರೈಸ್ತರಿಗೆ ಹಣದ ಅಗತ್ಯತೆಯು ಉದ್ಭವಿಸಿದಾಗ, ಅವನು ತನ್ನ ಸ್ವಾಸ್ತ್ಯವನ್ನು ಮಾರಿ ಅದರ ಹಣವನ್ನು ಇತರರ ಕೊರತೆಯನ್ನು ನೀಗಿ ಸುವದಕ್ಕಾಗಿ ಅಪೊಸ್ತಲರ ಪಾದಗಳಲ್ಲಿ ಇಟ್ಟನು (ಅಪೊಸ್ತಲರ ಕೃತ್ಯಗಳು 4:36, 37). ಪೌಲನು ಕ್ರಿಸ್ತ ಸಭೆಯು ಹಿಂಸಕನು ಎಂದು ಸಹೋದರರು ತಿಳಿದಾಗ, ಬಾರ್ನಬನು ಅವನನ್ನು ಪರಿವರ್ತನೆಗೊಂಡವನು ಎಂದು ಅವರಿಗೆ ಪರಿಚಯಿಸಿದನು (ಅಪೊಸ್ತಲರ ಕೃತ್ಯಗಳು 9:26, 27). ಬಾರ್ನಬನು ಪ್ರಸಂಗ ಮಾಡುವದಕ್ಕೆ ತನ್ನ ಜೀವಿತವನ್ನು ಮೀಸ ಲಿಟ್ಟಿದ್ದನು, ಪೌಲನ, ಪ್ರಥಮ ಸೇವಾ ಪ್ರಯಾಣದಲ್ಲಿ ಅವನ ಸಂಗಡ ಇದ್ದನು (ಅಪೊಸ್ತಲರ ಕೃತ್ಯಗಳು 13:2). ಪ್ರಯಾಣದ ಅಂತ್ಯದಲ್ಲಿ, ಸುನ್ನತಿಯ ಕುರಿತ ಚರ್ಚಿಸಲು ಯೆರೂಸಲೇಮಿನಲ್ಲಿ ಪೌಲನೊಂದಿಗೆ ಸಹಕರಿಸಿದ್ದನು (ಗಲಾತ್ಯ 2:1); ಆದರೆ ಪೇತ್ರನ ತಪ್ಪಾಭಿಪ್ರಾಯದ ಕ್ರಿಯೆಯಲ್ಲಿ ಪಾಲುಗಾರನಾಗಿದ್ದನು. ಈ ವಿಷಯದಲ್ಲಿ ಪೌಲನು ಅವರನ್ನು ಗದರಿಸಿದನು (ಗಲಾತ್ಯ 2:13, 14). ಬಾರ್ನಬನು ಅಂತಿಯೋಕ್ಯದಲ್ಲಿ ಪ್ರಮುಖವಾದ ಪ್ರಸಂಗಿ ಮತ್ತು ಬೋಧಕ ನಾಗಿದ್ದನು (ಅಪೊಸ್ತಲರ ಕೃತ್ಯಗಳು 15:35), ಪೌಲನು ಪ್ರತ್ಯೇಕಗೊಂಡಾಗ, ಅವನು ಸಹ ಪ್ರತ್ಯೇಕವಾದ ಸೇವಾ ಪ್ರಯಾಣವನ್ನು ಮಾಡಿದ್ದನು (ಅಪೊಸ್ತಲರ ಕೃತ್ಯಗಳು 15:39). ಅವನೂ ಸಹ ಕ್ರಿಸ್ತನಿಗೆ ಸಮರ್ಪಿಸಿ ಕೊಂಡವನಾಗಿದ್ದನು.

ಸ್ತೆಫನನು ಸಹ, ಮೃದು ಧೋರಣೆಯ, ಛಲವಾದ ಪ್ರಸಂಗಿಯಾಗಿದ್ದನು, ಅವನು ಕ್ರಿಸ್ತನಿಗೆ ಬಲ ಪ್ರದವಾದ ಸಮರ್ಪಣೆಯ ಜೀವಿತವನ್ನು ಹೊಂದಿದ್ದನು. ಅವನು ಯೆಹೂದ್ಯರು ನೀಡಿದ ಭಯಂಕರವಾದ ಅಪಾಯವನ್ನು ಲೆಕ್ಕಿಸಲಿಲ್ಲ; ತನ್ನ ಪ್ರಾಣವನ್ನು ಈಡಾಗಿ ನೀಡಿ, ತನ್ನನ್ನು ಕೊಂದವರಿಗಾಗಿ ಪ್ರಾರ್ಥಿಸಿದನು (ಅಪೊಸ್ತಲರ ಕೃತ್ಯಗಳು 7:54-60).

ಶಿಷ್ಯ ಮಂಡಲಿಯಲ್ಲಿದ್ದ ಗ್ರೀಕ್ ಭಾಷೆಯ ವಿಧವೆಯರನ್ನು ಪೋಷಣೆ ಮಾಡುವ ವಿಚಾರದಲ್ಲಿ ಫಿಲಿಪ್ಪನು ಸಹ ಪಾಲುದಾರನಾಗಿದ್ದನು (ಅಪೊಸ್ತಲರ ಕೃತ್ಯಗಳು 6:1-5). ನಂತರ ಅವನು ಯೆರೂಸಲೇಮಿನಿಂದ ಹೊರಟು, ಸಮಾರ್ಯದಲ್ಲಿ ಭಕ್ತಿ ಸಂಜೀವನದ

ಸಂದೇಶವನ್ನು ಸಾರಿದ್ದರಿಂದ, ಅಲ್ಲಿ ವಿಶೇಷವಾದ ಪರಿಣಾಮ ಉಂಟಾಯಿತು (ಅಪೊಸ್ತಲರ ಕೃತ್ಯಗಳು 8:5, 6). ದೇವದೂತನ ಕರೆಯ ಮೇರೆಗೆ, ಆ ಕಾರ್ಯವನ್ನು ಬಿಟ್ಟು, ಎಥಿಯೋಪಿಯದ ಮನುಷ್ಯನ ರಥವನ್ನು ಏರಿ, ಅವನಿಗೆ "ಯೇಸುವನ್ನು ಪ್ರಸಂಗಿಸುವ ಅವಕಾಶವನ್ನು ಪಡಕೊಂಡು" (ಅಪೊಸ್ತಲರ ಕೃತ್ಯಗಳು 8:26-35). ನಂತರ ಅವನ ಅಜೋತದಲ್ಲಿಯೂ ಹಾಗೂ ಕೈಸರೆಯ ಹಾದಿಯಲ್ಲಿದ್ದ ಇತರ ಪಟ್ಟಣಗಳಲ್ಲೂ ಪ್ರಸಂಗಿಸಿದನು (ಅಪೊಸ್ತಲರ ಕೃತ್ಯಗಳು 8:40). ಹಲವಾರು ವರ್ಷಗಳ ಕಾಲ ಅವನು ಕೈಸರೈಯಲ್ಲಿ ತಂಗಿರುವಾಗಲು ಅವನನ್ನು ಸೌವಾರ್ತಿಕನು ಎಂಬ ನಾಮಾಂಕಿತದಿಂದ ದಾಖಲೆಮಾಡಿರುವರು; ಅವನಿಗೆ ನಾಲ್ಕು ಜನ ಕನ್ಯೆಯರಾದ ಹೆಣ್ಣು ಮಕ್ಕಳು ಇದ್ದು ಅವರು ಪ್ರವಾದನೆ ಮಾಡುತ್ತಿದ್ದರು. ಪೌಲ ಮತ್ತು ಸಂಗಡಿಗರು ತಮ್ಮ ಮೂರನೆಯ ಸೇವಾ ಪ್ರಯಾಣವನ್ನು ಮುಗಿಸಿ ಹಿಂತಿರುಗಿದಾಗ, ಅವರಿಗೆ ಅತಿಥ್ಯವನ್ನು ನೀಡಿದ್ದನು (ಅಪೊಸ್ತಲರ ಕೃತ್ಯಗಳು 21:8). ಅವನು ಕ್ರಿಸ್ತನಿಗೆ ಸಮರ್ಪಿತವಾದ ಜೀವಿತವನ್ನು ಹೊಂದಿದ್ದರು.

ತಾರ್ಸದ ಸೌಲನು ಶಿಲುಬೆಯ ಬಲವಾದ ಸಿಪಾಯಿಯಾಗಿದ್ದು, ಅವನು ಮಾಡಿದ ಕಾರ್ಯಗಳನ್ನು ತೀವ್ರವಾಗಿ ಮಾಡಿದನು (ಅಪೊಸ್ತಲರ ಕೃತ್ಯಗಳು 9:27-29). ಈ ಹಿಂದೆ ಕ್ರೈಸ್ತರ ಹಿಂಸಕನಾಗಿದ್ದನು (ಅಪೊಸ್ತಲರ ಕೃತ್ಯಗಳು 7:58; 8:1; 9:21). ಅವನು ತನ್ನನ್ನು ಕ್ರಿಸ್ತನಿಗೆ ಸಮರ್ಪಿಸಿದ ಕಾರ್ಯವು ಆಗಿ ಸಭೆಯ ಚರಿತ್ರೆಯಲ್ಲಿ ಗುರುತರವಾಗಿತ್ತು. ಅವನ ಮನಸ್ಸನ್ನು ಯಾವ ಸಂಗತಿಯು ಮಾರ್ಪಾಡು ಮಾಡಿತು? ಯೇಸು ಮರಣದಿಂದ ಪುನರುತ್ಥಾನ ಹೊಂದಿದ ಉತ್ತರವಿಲ್ಲದ ಸತ್ಯಾಂಶವೇ (ರೋಮಾಪುರ 1:4)? ಪೌಲನು ಮಾರ್ಪಾಟು ಹೊಂದಿದ ಕಾರ್ಯವನ್ನು ಲೂಕನು ದಾಖಲಿಸಿ ಪಾಲಿಸ್ತೇನಿನಲ್ಲಿ ಸಮಾಧಾನವು ಉಂಟಾಗಿ, ಅಲ್ಲಿ ಸಭೆಗಳು ವೃದ್ಧಿಗೊಂಡವು ಎಂದಿರುವನು (ಅಪೊಸ್ತಲರ ಕೃತ್ಯಗಳು 9:31). ಪೌಲನು ಯೇಸುವಿನ ತನ್ನನ್ನು ಸಮರ್ಪಿಸಿಕೊಂಡ ನಿಮಿತ್ತ ಆದಿ ಸಭೆಯಲ್ಲಿ ವ್ಯತ್ಯಾಸಗಳು ಉಂಟಾದವು!

ಯೊಪ್ಪದ ದೊರ್ಕಳು ತನ್ನ "ಉತ್ತಮ ಕ್ರಿಯೆಗಳಿಂದ" ತನ್ನ ಸಮರ್ಪಣೆಯ ಜೀವಿತವನ್ನು ಇತರರಿಗೆ ಪ್ರದರ್ಶಿಸಿದಳು. ಕರ್ತನ ಸೇವೆಯಲ್ಲಿ ಆಕೆಯು ತೋರಿದ ಔದಾರ್ಯ ನಿಮಿತ್ತ ಮೆಚ್ಚುಗೆಯನ್ನು, ಘನವನ್ನು ಹೊಂದಿದಳು (ಅಪೊಸ್ತಲರ ಕೃತ್ಯ ಗಳು 9:36-39). ಆಕೆಯ ಮರಣದ ನಂತರವು ಅವಳ ಉತ್ತಮ ಕ್ರಿಯೆ ಹಾಗೂ ಸಮರ್ಪಣೆಯ ಜೀವಿತದ ಬಗ್ಗೆ ಜನರು ಸಾಕ್ಷಿ ಹೇಳಿದರು.

ಕೊರ್ನೇಲ್ಯನು ನೈತಿಕ ಹಾಗೂ ಯೋಗ್ಯವಾದ ಜೀವಿತವನ್ನು ಜೀವಿಸಿದ್ದರಿಂದ, ಈ ದಿನಗಳಲ್ಲಿಯೂ ಸಹ, ಯಾರೂ ಸಹ ತಮ್ಮನ್ನು ಅವನಿಗೆ ಹೋಲಿಸಿಕೊಳ್ಳಲಾರರು (ಅಪೊಸ್ತಲರ ಕೃತ್ಯಗಳು 10:1, 2, 22). ಪರಿವರ್ತನೆಗೊಂಡ ಅನ್ಯರಲ್ಲಿ ಅವನು ಮೊದಲಿಗನು, ಅವನ ಪರಿವರ್ತನೆಯ ನಿಮಿತ್ತ ಕರ್ತನು ಯೆಹೂದ್ಯರಲ್ಲಿದ್ದ ಮತಬೇದ ವನ್ನು ಮುರಿದು ಹಾಕಿದನು.

ಸೆರ್ಗಯ ಪೌಲನು ಸರ್ಕಾರದ ಅಧಿಕಾರಿಯಾಗಿದ್ದನು, ಅವನು ಕುಪ್ರದ್ವೀಪದ ಸ್ಥಳೀಯ ಅಧಿಕಾರಿಯಾಗಿದ್ದನು. ಪೌಲನು ಮಂತ್ರವಾದಿಯಾದ ಎಲೀಮನನ್ನು ತಾತ್ಕಾಲಿಕವಾಗಿ ಕುರುಡನನ್ನಾಗಿ ಮಾಡಿದ ವಿಚಾರವನ್ನು ಗಮನಿಸಿ, ತನ್ನ ಜೀವಿತವನ್ನು ಕ್ರಿಸ್ತನಿಗೆ ಸಮರ್ಪಿಸಿದ್ದನು (ಅಪೊಸ್ತಲರ ಕೃತ್ಯಗಳು 13:6-12).

ಲುದ್ಯಳು ಥವತ್ತೈರದ ವ್ಯಾಪಾರಿ ಸ್ತ್ರೀಯಾಗಿದ್ದಳು, ಅವಳು ಫಿಲಿಪ್ಪಿಯಲ್ಲಿರುವಾಗ ಆರಾಧನೆಯ ಸ್ಥಳದಲ್ಲಿ ಪೌಲನನ್ನು ಸಂಧಿಸಿದಳು. ಅವಳು ಈಗಾಗಲೇ ದೇವರನ್ನು ಆರಾಧಿಸುವವಳಾಗಿದ್ದಳು, ಅವಳು ಬೇಗನೆ ಸತ್ಯಕ್ಕೆ ವಿಧೇಯಗಳಾಗಿ, ಪೌಲ ಮತ್ತು ಸಂಗಡಿಗರಿಗೆ ಅತಿಥಿ ಸತ್ಕಾರವನ್ನು ನೀಡಿದಳು (ಅಪೊಸ್ತಲರ ಕೃತ್ಯಗಳು 16:13-15), ಅವಳ ಔದಾರ್ಯ ಹಾಗೂ ಅತಿಥಿ ಸತ್ಕರವೇ, ಅವಳ ಕ್ರಿಸ್ತನ ಮೇಲಿನ ಸಮರ್ಪಣೆಯ ಗುರುತಾಗಿತ್ತು.

ಫಿಲಿಪ್ಪಿಯ ಸೆರೆ ಯಜಮಾನನು ತನ್ನ ಜೀವಿತವನ್ನು ಪೂರ್ಣವಾಗಿ ತಿರುಗಿಸಿದನು. ಅವನು ತನ್ನ ಕುಟುಂಬವನ್ನೆಲ್ಲಾ ಕ್ರೈಸ್ತರನ್ನಾಗಿ ಮಾಡಿದನು (ಅಪೊಸ್ತಲರ ಕೃತ್ಯಗಳು 16:27-34). ಗಾಯಗೊಂಡ ಪೌಲ ಮತ್ತು ಸೀಲರ ಗಾಯಗಳನ್ನು ತೊಳೆದು ತನ್ನ ಪರಿವರ್ತನೆಯನ್ನು ಪ್ರದರ್ಶಿಸಿದನು, ಅವನು ಅವರನ್ನು ತನ್ನ ವ್ಯಯಕ್ತಿಕ ಸ್ಥಳಕ್ಕೆ ಕರೆದೊಯ್ದು ಅವರನ್ನು ಪೋಷಿಸಿದನು.

ಕೊರಿಂಥದ ದೇವ ಮಂದಿರಲ್ಲಿದ್ದ, ಯೆಹೂದ್ಯ ಅಧಿಕಾರಿಯಾಗಿದ್ದ ಕ್ರಿಸ್ಪನು ಪೌಲನನ್ನು ಸೇರಿಕೊಂಡು, ತನ್ನ ಸಹ ಯೆಹೂದ್ಯರು ಮಾಡಿದ ದೇವದೂಷಣೆಯನ್ನು ವಿರೋಧಿಸಿದನು. ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಲು ಅವನು ಪ್ರತ್ಯೇಕತೆಯನ್ನು ಹೊಂದಿದ್ದರೂ ಅವನ ಪರಿವರ್ತನೆಯಿಂದ ಇತರೆ ಕೊರಿಂಥದವರು ಕ್ರಿಸ್ತನಲ್ಲಿ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು ಪ್ರಭಾವಿತರಾದರು (ಅಪೊಸ್ತಲರ ಕೃತ್ಯಗಳು 18:8). ಯೆಹೂದ್ಯ ಮಂದಿರದ ಈ ಪ್ರಮುಖನ ಪರಿವರ್ತನೆಯಿಂದ, ಹಾಗೂ ಅವನು ಕ್ರಿಸ್ತನಿಗೆ ಸಮರ್ಪಿತನಾಗಿದ್ದರಿಂದ ಕೊರಿಂಥದಲ್ಲಿದ ಪೂರ್ಣ ಯೆಹೂದ ಸಮುದಾಯದಲ್ಲಿ ಪರಿಣಾಮವನ್ನು ಬೀರಿತ್ತು.

ಮಾರ್ಗದರ್ಶನದ ಅಗತ್ಯವಿದ್ದ ಬೋಧಕನಾದ ಅಪೊಲ್ಲೋಸನ ಕುರಿತಾಗಿಯೂ ಅಪೊಸ್ತಲರ ಕೃತ್ಯವು ತಿಳಿಸುತ್ತದೆ. ಸ್ನಾನಿಕನಾದ ಯೋಹನನ ಬೋಧನೆಗೆ ಪ್ರಭಾವಿತನಾಗಿ ಪರಿವರ್ತನೆಗೊಂಡಿದ್ದನು. ನಂತರ ಆ ಸತ್ಯವನ್ನು ಅವನು ಬೋಧಿಸುತ್ತಿದ್ದನು. ಸಭಾಸ್ಥಾಪನೆಗೊಂಡ ನಂತರ ಯೋಹಾನನ ಬೋಧನೆಯು ಮುಂದುವರಿಯಲಿಲ್ಲ, ಯಾಕೆಂದರೆ ಯೇಸು ಮರಣವನ್ನು ಹೊಂದಿ, ದೇವರ ರಾಜ್ಯವಾದ - ಕರ್ತನ ಸಭೆಯು - ಭೂಲೋಕವನ್ನು ಆಳುವದಕ್ಕೆ ಪ್ರಾರಂಭಮಾಡಿತ್ತು (ಅಪೊಸ್ತಲರ ಕೃತ್ಯಗಳು 18:24, 25). ಅಪೊಲೊಸ್ಸನ ಸೇವೆಯ ನಿಮಿತ್ತ ಎಫೆಸದ ಕೆಲವಾರು ಜನರು ಯೋಹಾನನ ದೀಕ್ಷಾಸ್ನಾನವನ್ನು ಹೊಂದಿಕೊಂಡಿದ್ದರು, ಅದು ಈಗ ನಿರರ್ಥಕವಾದ ಸಂಗತಿಯಾಗಿತ್ತು. ಪೌಲನು ಅವರನು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿದನು ಮತ್ತು ಕ್ರಿಸ್ತನು ಆ ದೇಶಮಾಡಿದ ದೀಕ್ಷಾಸ್ನಾನವನ್ನು ಉಪದೇಶಿಸಿದನು.[1] ಅವರ ಮೊದಲ ದೀಕ್ಷಾಸ್ನಾನವು ಚಲಾವಣೆ ಇಲ್ಲದ್ದು, ಹಾಗೂ ಪುರಾತನವಾದದ್ದು ಆಗಿತ್ತು, ಆದರಿಂದ ಅವರಿಗೆ ಯಾವುದೇ ಆತ್ಮೀಕ ಲಾಭವಾಗಿರಲಿಲ್ಲ. ಎಫೆಸದಲ್ಲಿ ಪೌಲನು ಯಾವುದೇ ವಿಧವಾದ ಯೇಸುವಿನ ಶಿಷ್ಯರನ್ನು ಕಾಣಲಿಲ್ಲ. ಅವನು ಅವರಿಗೆ ಸುವಾರ್ತೆಯನ್ನು ತಲುಪಿಸುವದರಲ್ಲಿ ಮೊದಲಿಗನಾದನು. ಅವರು ಪವಿತ್ರಾತ್ಮನ ವಿಚಾರವನ್ನು ಅರಿಯದವರಾಗಿದ್ದರು ಎಂದು ಪೌಲನು ಗ್ರಹಿಸಿಕೊಂಡಾಗ, ಅವರು ಹೊಂದಿದ್ದ ದೀಕ್ಷಾಸ್ನಾನದ ಕುರಿತಾಗಿ ಪರಿಶೀಲನೆ ಮಾಡಿದನು (ಅಪೊಸ್ತಲರ ಕೃತ್ಯಗಳು 19:1-7). ಅಲ್ಲಿದ್ದ ಹನ್ನೆರಡು ಜನರನ್ನು ಕ್ರಮ ಪಡಿಸಿದನು, ಅವರಿಗೆ ದೀಕ್ಷಾಸ್ನಾನ ನೀಡಿ, ಹೊಸದಾಗಿ ಹುಟ್ಟುವ ಅನುಭವವನ್ನು ನೀಡಿದನು.

ಪ್ರೀಸ್ಕಿಲ ಹಾಗೂ ಅಕ್ವಿಲರು ಅಪೊಲ್ಲೋಸನನ್ನು ಸಂಧಿಸಿದಾಗ, ಅವನು ಇನ್ನು ಸಹ ಚಲಾವಣೆ ಇಲ್ಲದ ದೀಕ್ಷಾಸ್ನಾನವನ್ನು ಬೋಧಿಸುತ್ತಿದ್ದನು, ಅದು ಸ್ನಾನಿಕನಾದ ಯೋಹಾನನ ಸಿದ್ಧಾಂತವಾಗಿತ್ತು, ನಂತರ ಅವರು ಅವನನ್ನು ಪ್ರತ್ಯೇಕವಾಗಿ ಕರಕೊಂಡು ಹೋಗಿ, ಅವನಿಗೆ ಕ್ರಮ ಬದ್ಧವಾದ ಉಪದೇಶವನ್ನು ನೀಡುವಾಗ, ಅವನು ತಕ್ಷಣವೇ ತನ್ನನ್ನು ಸರಿಪಡಿಸಿಕೊಂಡನು. ನಂತರ ಅವನು ಬೆಲೆಯುಳ್ಳ ಹಾಗೂ ಪ್ರಭಾವಿಯಾದ ಪ್ರಸಂಗಿಯಾದನು (ಅಪೊಸ್ತಲರ ಕೃತ್ಯಗಳು 18:26-28).

ಯೇಸುವಿಗೆ ಸಮರ್ಪಿಸಿಕೊಂಡವರಲ್ಲಿ ಅಪೊಲ್ಲೋಸನು ಪ್ರಮುಖನಾದನು, ಅವನು ತಪ್ಪಾದ ದೀಕ್ಷಾಸ್ನಾನವನ್ನು ಹೊಂದಿದ್ದನು ಎಂದು ಮನವರಿಕೆಗೊಂಡಾಗ, ತನ್ನ ಬೋಧನೆಯನ್ನು ಮಾರ್ಪಾಡು ಮಾಡಿಕೊಂಡನು. ನಂತರ ಪೌಲನು ಎಫೆಸದವರಿಗೆ ಬರೆಯುವಾಗ, ಅವರು "ಕೃಪೆಯಿಂದಲೇ ರಕ್ಷಣೆ ಹೊಂದಿದರು" ಎಂದು ತಿಳಿಸಿದನು (ಎಫೆಸ 2:8, 9); ಆದ್ದರಿಂದ ಎಫೆಸದವರು "ಕೃಪೆಯಿಂದಲೇ ರಕ್ಷಣೆ" ಎಂದು ದೃಢೀಕರಿಸಿದರು,

ಅದರಲ್ಲಿ ದೀಕ್ಷಾಸ್ನಾನದ ಪರಿಶೀಲನೆಯ ಸಹ ಒಳಗೊಂಡಿರುತ್ತದೆ, ಪುನಃ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಸಾಧ್ಯತೆಯು ಸಹ ಇರುತ್ತದೆ. ಈ ಹಿಂದಿನ ತಪ್ಪಾದ ಬೋಧನೆಯನ್ನು ಮಾರ್ಪಡಿಸಿಕೊಳ್ಳಬೇಕೆಂಬ ಸಿದ್ಧಾಂತವನ್ನು ಸಹ ತಿಳಿಸುತ್ತದೆ.

ಪ್ರಿಸ್ಕಿಲ್ಲ ಮತ್ತು ಅಕ್ವಿಲ್ಲರರು ಕರ್ತನ ಸೇವೆಯಲ್ಲಿ ಪಾಲುಗಾರರಾಗಿರುವದನ್ನು ಪುನಃ ಗಮನಿಸುತ್ತೇವೆ. ಅವರನ್ನು ಮೊದಲು ಪೌಲನ ಸಂಗಡ ಕೊರಿಂಥದಲ್ಲಿರುವದನ್ನು ಗಮನಿಸುತ್ತೆವೆ (ಅಪೊಸ್ತಲರ ಕೃತ್ಯಗಳು 18:1-3). ನಂತರ ಅವರು ಪೌಲನೊಂದಿಗೆ ಪ್ರಯಾಣಿಸಿ ಎಫೆಸದಲ್ಲಿ ಸೇವೆಸಲ್ಲಿಸಿದರು (ಅಪೊಸ್ತಲರ ಕೃತ್ಯಗಳು 18:18, 26). ಅಲ್ಲಿರುವಾಗ ಅವರು ಪೌಲನೊಂದಿಗೆ ಸೇರಿ, ಅವರ ಜೊತೆ ಈ ಹಿಂದೆ ಇದ್ದವರನ್ನು ವಂದಿಸಿದರು (1 ಕೊರಿಂಥ 16:19). ತರುವಾಯ ಅವರು ರೋಮಾಯದಲ್ಲಿಯ ಸೇವೆ ಮಾಡಿದರು (ರೊಮಾಪುರ 16:3). ನಂತರದಲ್ಲಿಯೂ ಅವರು ಪೌಲನ ಎರಡು ವರ್ಷಗಳ ಕಾಲದ ರೋಮಾಯದ ಸೆರೆಮನೆಯ ವಾಸದ ಸಮಯದಲ್ಲಿ ರೋಮಾಯದಲ್ಲಿ ವಾಸಿಸಿರಬಹುದು (ಅಪೊಸ್ತಲರ ಕೃತ್ಯಗಳು 28:30, 31), ಆ ದೈವ ಭಕ್ತಿಯ ಕುಟುಂಬವು ಎಫೆಸದಲ್ಲಿ ತಿಮೊಥಿಯನೊಂದಿಗಿದ್ದು ಸೇವೆ ಮಾಡಿದರು (2 ತಿಮೊಥೆ 4:19). ಪೌಲನ ರೋಮಾಯದ ಸೆರೆವಾಸದ ನಂತರದಲ್ಲಿ 2 ತಿಮೊಥಿ ಬರೆದಿರ ಬಹುದಾಗಿರುವದರಿಂದ, ಅಕ್ವಿಲ ಮತ್ತು ಪ್ರಿಸ್ಕಿಲರನ್ನು ಕೊನೆಯದಾಗಿ ಎಫೆಸದಲ್ಲಿರುವದನ್ನು ಕಾಣುತ್ತೇವೆ. ಅವರ ಸಭೆಯ ಸೇವೆಯು, ಅವರು ಕರ್ತನಿಗೆ ಸಮರ್ಪಿತರಾದವರು ಎಂದು ತಿಳಿಸುತ್ತದೆ.

ಪೌಲನು ಸೆರೆಯಲ್ಲಿರುವಾಗ ಓನೇಸಿಪೂರನು ಅವನನ್ನು ಸಂಧಿಸಿದ್ದನು. "ಅನ್ಯ ಸೀಮೆಯವರೆಲ್ಲರೂ ನನ್ನನ್ನು ಕೈ ಬಿಟ್ಟಾಗ ಓನೇಸಿಪೂರನು ಅವನನ್ನು ಅನೇಕಾವರ್ತಿ ಆದರಿಸಿದನು" (2 ತಿಮೊಥೆ 1:15, 16). ಆದರೆ ಪೌಲನು ತಾನೇ ಇತರರನ್ನು ಸಂಧಿಸಿ ಉತ್ತೇಜಿಸುತ್ತಿರುವಾಗ, ಓನೇಸಿಪೂರನು ಪೌಲನನ್ನು ಉತ್ತೇಜನ ಮಾಡಿದನು. ಅವನು ಪೌಲನು ಹುಡುಕಿ ಸಂಧಿಸಿದ್ದನು, ಪೌಲನ ಸೆರೆವಾಸದ ಕುರಿತು ನಾಚಿಕೆ ಪಟ್ಟಿರಲಿಲ್ಲ (ನನ್ನ ಬೇಡಿಗಳ ನಿಮಿತ್ತ). ಎಫೆಸದಲ್ಲಿ ಅವನು ಮಾಡಿದ ಸೇವೆಯು ಪ್ರಚಲಿತವಾಗಿತ್ತು (2 ತಿಮೊಥೆ 1:17, 18), ಇವನು ಸಹ ಧ್ಯೇಯದ ಸಮರ್ಪಣೆಯನ್ನು ಹೊಂದಿದವನಾಗಿದ್ದನು.

## ಮುಕ್ತಾಯ

ಅಪೊಸ್ತಲ ಕೃತ್ಯವು *ಧೈರ್ಯದ ಹಾಗೂ ಸಮರ್ಪಣೆಯ* ಪುಸ್ತಕವಾಗಿದೆ. ಅದು ಅಗತ್ಯತೆಗೆ ಅನುಗುಣವಾದ ಹೊಂದಾಣಿಕೆಯನ್ನು ಮಾಡುವ ಪುಸ್ತಕವಾಗಿರುವದಿಲ್ಲ. ಅದು *ಕ್ರಿಸ್ತನ ಪ್ರಚಾರದ* ಪುಸ್ತಕವಾಗಿದೆ; ಸಮರ್ಪಣೆಯಿಂದ ಪರಿಣಾಮ ಬೀರುತ್ತದೆ ಎಂದು ತೋರುವ ಪುಸ್ತಕವಾಗಿದೆ. ಅದ ಬಹಳ ಬೆಲೆಯುಳ್ಳದ್ದಾಗಿದ್ದು, ಕೆಲವು ಸಾರಿ ಪ್ರಾಣವನ್ನು ಕಳಕೊಳ್ಳುವ, ಹಾಗೂ ನಂಬಿಕೆಯಿಂದ ಯೇಸುವನ್ನು ಹಿಂಬಾಲಿಸುವ ಪುಸ್ತಕವಾಗಿದೆ. ತಂದೆ ಮತ್ತು ಮಗನ ಮಾಡಿರುವ ತ್ಯಾಗಕ್ಕಿಂತಲೂ, ಶಿಷ್ಯರ ತ್ಯಾಗವು ಮಹತ್ತರವಾದದ್ದಲ್ಲ ಎಂದು ತಿಳಿಸುತ್ತದೆ. ಪ್ರತಿ ಒಂದು ಪರಿವರ್ತನೆಯಲ್ಲಿ, ಅತಿ ಬೆಲೆಯುಳ್ಳ ಸಮರ್ಪಣೆಯನ್ನು ಕಾಣುತ್ತೇವೆ. ಯೇಸುವಿಗೆ ಸಮರ್ಪಣೆ ಎಂದು ತನ್ನನ್ನು ತಾನು ನಿರಾಕರಿಸುವದೇ (ಮತ್ತಾಯ 16:24).

ಯೇಸು ನಮ್ಮಿಂದ ಉತ್ತಮವಾದದ್ದನ್ನೇ ಬಯಸುತ್ತಾನೆ. ಅರ್ಧ ಮನಸ್ಸಿನ ಕ್ರೈಸ್ತತ್ವವು ಮನ್ಯವಾಗುವದಿಲ್ಲ. ಹೃದಯವ ಕ್ರಿಸ್ತನಿಗೂ ಮತ್ತು ಪ್ರಪಂಚಕ್ಕೂ ನಡುವೆ ಇಬ್ಭಾಗವಾಗುವದಿಲ್ಲ. "ಪ್ರಪಂಚದ ಸ್ನೇಹವು ದೇವರಿಗೆ ವೈರತ್ವ" (ಯಾಕೋಬ 4:4). ಪೂರ್ಣ ಹೃದಯದಿಂದ ಶೇಕಡ 100/ ರಷ್ಟು ಮಾಡುವದೇ ಕರ್ತನ ಮಾರ್ಗವಾಗಿದೆ. ಅದನ್ನು ಪೂರ್ಣವಾಗಿ ದೇವರಿಗೆ ಸಮರ್ಪಿಸಬೇಕು. ಪೂರ್ಣಹೊಂದಲು, ಆತ್ಮ, ಪ್ರಾಣ ಮತ್ತು ಬಲದಿಂದ ದೇವರಿಂದ ಪ್ರೀತಿಸಬೇಕೆಂಬದೇ ದೇವರು ಮೊದಲ ಆಜ್ಞೆಯಾಗಿದೆ (ಮತ್ತಾಯ 22:37, 38).